# ನಾ.ಶ್ರೀ. ರಾಜಪುರೋಹಿತ

## ಕನ್ನಡದ ಆದ್ಯ ಶ್ರೇಷ್ಠ ಸಂಶೋಧಕ



**ದುಷ್ಯಂತ ನಾಡಗೌಡ**

ಆಧುನಿಕ ಕರ್ನಾಟಕ ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ ಮಹನೀಯರಲ್ಲಿ ಧಾರವಾಡವನ್ನು ಕರ್ಮಭೂಮಿಯನ್ನಾಗಿಸಿಕೊಂಡು ದುಡಿದ ನಾ.ಶ್ರೀ. ರಾಜಪುರೋಹಿತರೂ ಒಬ್ಬರು. ಆಲೂರು ವೆಂಕಟರಾಯರೊಂದಿಗೆ ಕನ್ನಡ ಪ್ರಜ್ಞೆಯನ್ನು ಕಟ್ಟುವ ಕೆಲಸದಲ್ಲಿ ತೊಡಗಿಕೊಂಡ ಪುರೋಹಿತರ ಅಧ್ಯಯನ ಹಾಗೂ ಸಂಶೋಧನೆಯ ಶಿಸ್ತು ಇಂದಿನವರಿಗೂ ಮಾದರಿ.

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಿಂದ ಇಪ್ಪತ್ತನೇ ಶತಮಾನದ ಮೊದಲ ಐವತ್ತು ವರ್ಷಗಳನ್ನು ಆಧುನಿಕ ಕರ್ನಾಟಕ-ಕನ್ನಡ ಹೊರಹೊಮ್ಮಿದ ಕಾಲವೆಂದು ಗುರುತಿಸಬೇಕು; ಮತ್ತು ಈ ಹೊರಹೊಮ್ಮುವಿಕೆಗೆ ಕೇಂದ್ರವಾದುದು ಧಾರವಾಡ ಮತ್ತು ಧಾರವಾಡದ ಅಪ್ರತಿಮ ನಾಡಭಕ್ತರು ಎಂದು ಹೇಳಬೇಕು. ಇವರಲ್ಲಿ ಪ್ರಮುಖವಾಗಿ ರಾ.ಹ. ದೇಶಪಾಂಡೆ, ಡೆಪ್ಯೂಟಿ ಚನ್ನಬಸಪ್ಪ, ಆಲೂರು ವೆಂಕಟರಾಯರು ಮತ್ತು ನಾ.ಶ್ರೀ. ರಾಜಪುರೋಹಿತರನ್ನು ಗುರುತಿಸಬೇಕು.

ಆಧುನಿಕ ಕರ್ನಾಟಕವನ್ನು ರೂಪಿಸುವ ಕಾರ್ಯ ಆರಂಭವಾದದ್ದು 1860ರಲ್ಲಿ, ದಕ್ಷಿಣ ಮುಂಬಯಿ (ಉತ್ತರ ಕರ್ನಾಟಕ) ರಾಜ್ಯದ ಶಿಕ್ಷಣಾಧಿಕಾರಿಯಾಗಿ- ಕಮಿಷನರ್ ಆಗಿ- ರಸೆಲ್ ಅವರು ಬಂದ ನಂತರ. 1565ರ ರಾಕ್ಷಸ-ತಂಗಡಗಿ ಯುದ್ಧದಿಂದಾಗಿ ಅಲ್ಲಿಯವರೆಗೆ ಸುಮಾರು ಎರಡು ನೂರು ವರ್ಷ ಒಂದೇ ಆಡಳಿತದ ಅಧಿಪತ್ಯದಲ್ಲಿದ್ದ ಕನ್ನಡಿಗರು ಹೋಳು ಹೋಳಾದರು. ಪ್ರಮುಖವಾಗಿ ಹೈದರಾಬಾದದ ನಿಜಾಮ ರಾಜ್ಯದಲ್ಲಿ, ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಹಾಗೂ ಮರಾಠಿ ಭಾಷಿಕರ ಪ್ರಭಾವದ ಮುಂಬೈ ಕರ್ನಾಟಕದಲ್ಲಿ. ಇವರು ಅಲ್ಲಲ್ಲಿ ಈ ಮೂರು ನೂರು ವರ್ಷಗಳು ಬದುಕಿ ತಮ್ಮತನವನ್ನೇ ಮರೆತಿದ್ದರು; ಸಾಕಷ್ಟು ಮಟ್ಟಿಗೆ ಕಳಕೊಂಡಿದ್ದರು. ಧಾರವಾಡ, ಬೆಳಗಾವಿ, ಬಿಜಾಪುರ ಹಾಗೂ ಕಾರವಾರ ಭಾಗದಲ್ಲಿ ಕನ್ನಡಿಗರು ಆ ಪ್ರಾಂತದ ಎರಡನೇ ದರ್ಜೆಯ ಪ್ರಜೆಗಳಾಗಿದ್ದರು. ಶ್ರೀರಂಗರು ಹೇಳುತ್ತಾರೆ: "ಈ ಭಾಗದಲ್ಲಿ ಕನ್ನಡದ